# ಎನ್‌ಐಟಿಕೆ ಕ್ಯಾಂಪಸ್: ಇ– ಮೊಬಿಲಿಟಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಸುರತ್ಕಲ್ ಎನ್‌ಐಟಿಕೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಅಂಗವಿಕಲ ಮಕ್ಕಳಿಗೆ ಕ್ಯಾಂಪಸ್ ಒಳಗೆ ಸಂಚರಿಸಲು ಅನುಕೂಲವಾಗುವ ಸ್ಮಾರ್ಟ್ ಇ- ಮೊಬಿಲಿಟಿ ವಾಹನಗಳನ್ನು ಹಸ್ತಾಂತರಿಸಲಾಯಿತು.

ಈ ವಾಹನಗಳು ಜಿಪಿಎಸ್ ಟ್ರ್ಯಾಕಿಂಗ್ ಮತ್ತು ಸ್ಮಾರ್ಟ್ ಲಾಕ್ ತಂತ್ರಜ್ಞಾನ ಹೊಂದಿವೆ. 25 ಇ- ಸೈಕಲ್‌ಗಳು, 7 ಮೋಟರೈಸ್ಡ್ ವೀಲ್‌ಚೇರ್‌ಗಳನ್ನು ಎನ್‌ಐಟಿಕೆ ಸಹ ಪ್ರಾಧ್ಯಾಪಕ ಪೃಥ್ವಿರಾಜ್ ವಿನ್ಯಾಸಗೊಳಿಸಿದ್ದಾರೆ. ಎಲ್ಲ ವಾಹನಗಳು 'ಉರ್ಜಾ' ಸೌರಶಕ್ತಿ ಚಾರ್ಜಿಂಗ್ ಸ್ಟೇಷನ್‌ಗೆ ಹೊಂದಿಕೊಳ್ಳುವಂತಿವೆ.

ಕಾಲೇಜಿನ 1989ನೇ ಬ್ಯಾಚ್‌ನ ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿದ್ಯಾರ್ಥಿಯಾಗಿದ್ದ ಪೆಟ್ರೊನೆಟ್ ಎಂಎಚ್‌ಬಿ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಸುಧೀರ್ ಕುಮಾರ್ ಇವುಗಳನ್ನು ಪ್ರಾಯೋಜಿಸಿದ್ದರು. ಹಸ್ತಾಂತರ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಅವರು, 'ಅಂಗವಿಕಲ ವಿದ್ಯಾರ್ಥಿಗಳಿಗೆ ಸಂಚಾರವೇ ಸವಾಲಾಗುವುದನ್ನು ತಪ್ಪಿಸಲು ಆ್ಯಪ್ ಆಧಾರಿತ ನಿಯಂತ್ರಣ ಮತ್ತು ಸುಧಾರಿತ ವೈಶಿಷ್ಟ್ಯ ಹೊಂದಿರುವ ವಾಹನಗಳನ್ನು ನೀಡಲಾಗಿದೆ' ಎಂದರು.



ಎನ್‌ಐಟಿಕೆಯಲ್ಲಿ ವಿದ್ಯಾರ್ಥಿಗಳ ಅನುಕೂಲಕ್ಕೆ ಬಿಡುಗಡೆ ಮಾಡಿರುವ ಸ್ಮಾರ್ಟ್ ಇ– ಮೊಬಿಲಿಟಿ ಸೈಕಲ್‌ಗಳು

ಎನ್‌ಐಟಿಕೆ ನಿರ್ದೇಶಕ ಪ್ರೊ. ರವಿ ಮಾತನಾಡಿ, 'ಈ ವಾಹನಗಳು ತರಗತಿಗಳಿಗೆ ಹಾಜರಾಗಲು ಮತ್ತು ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಕ್ಯಾಂಪಸ್‌ನಲ್ಲಿ ಸ್ವತಂತ್ರವಾಗಿ ಸಂಚರಿಸಲು ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ' ಎಂದರು.

ಪೆಟ್ರೋನೆಟ್‌ನ ತಾಂತ್ರಿಕ ವಿಭಾಗದ ಮುಖ್ಯಸ್ಥೆ ಸೈಸುಧಮ್ಮೀ, ಕಾರ್ಯಾಚರಣೆ ವಿಭಾಗದ ಮುಖ್ಯಸ್ಥ ಉದಯ ಪೈ, ಎನ್‌ಐಟಿಕೆ ಪ್ರಭಾರಿ ಕುಲಸಚಿವ ಪ್ರೊ. ಕುಮಾರ್ ಜಿ.ಎನ್, ಡೀನ್‌ಗಳಾದ ಪ್ರೊ. ಪ್ರಸನ್ನ ಬೆಳೂರು, ಪ್ರೊ. ವೆಂಕಟೇಶ ಪೆರುಮಲ್ ಇದ್ದರು.

Prajavani, Date: 03/03/2026, p. 03